# ಕನ್ನಡ ಕಾವ್ಯಗಳಲ್ಲಿ ಸಾಮಾಜಿಕ ಬದಲಾವಣೆ : ಒಂದು ವಿವೇಚನೆ

*ಡಾ.ಆರ್.ವಿ.ಪಾಟೀಲ*
*ಕನ್ನಡ ವಿಭಾಗ*
*ಜೆ. ಎಸ್. ಎಸ್. ಬನಶಂಕರಿ ಕಲಾ, ವಾಣಿಜ್ಯ ಹಾಗೂ ಎಸ್. ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ,*
*ವಿದ್ಯಾಗಿರಿ – ಧಾರವಾಡ –04*

**ಂಭಣಡಿಚಿಛಿಣ : ಸಾರಾಂಶ**

**ಕನ್ನಡ ಕಾವ್ಯಗಳು ಪ್ರಾರಂಬದಿಂದಲೂ ಸಮಾಜೋಧಾರ್ಮಿಕ ಚಿಂತನೆಗಳನ್ನು ಪ್ರಚುರಪಡಿಸತ್ತಾ, ಮಾನವನ ಮನೋವಿಕಸದೊಂದಿಗೆ ಬದುಕಿನ ಮೌಲ್ಯಗಳ ಪ್ರತಿಪಾದನೆ ಮಡಿರುವುದನ್ನು ಕಾಣಬಹುದು. ಕನ್ನಡ ಕಾವ್ಯಗಳಲ್ಲಿ ಮೂಡಿ ಬಂದ ಸಮಕಾಲಿನ ಸಂವೆಧನೆಗಳು ಹೇಗೆ ಧ್ವನಿಸುತ್ತವೆ ಎಂಬುದನ್ನು ಇಲ್ಲಿ ಅವಲೋಕಿಸಲು ಪ್ರಯತ್ನಿಸಲಾಗಿದೆ. ಕಾವ್ಯಗಳಲ್ಲಿ ಮೂಲ ಜನ ಜೀವನದ ಗತಿಬಿಂಬವನ್ನು ಹೊಸ ಮನ್ವಂತರಗಳಿಗೆ ಹೊಂದಿಕೊಂಡು ಸಾಗುವುದರೊಂದಿಗೆ ಭಾಷೆ, ಜಾತಿ, ಧರ್ಮ, ಹೊಸತನ, ಹುಟ್ಟು–ಸಾವು, ಮನಸುಗಳ ಕಟ್ಟುವ, ಕನಸುಗಳನ್ನು ಸಾಕಾರ ಗೊಳಿಸುವ, ಸಮಾನತೆಯ ಸಂದೇಶ ಹಾಗೂ ಭಾರತಿಯ ಸಂಸ್ಕೃತಿಯ ನೆಲೆಗಳು ಆಯಾ ಕಾಲಘಟ್ಟದ ಭಾಷೆಯಲ್ಲಿ ಕಾವ್ಯಗಳ ರಚನೆಯೊಂದಿಗೆ ಹೃದಯಂಗಮಯವಾಗಿಸಿ ವ್ಯಕ್ತಿ ಬದಲಾವಣೆಯೊಂದಿಗೆ ಸಮುಷ್ಠಿ ಬದಲಾವಣೆ ಹೇಗೆ ಸಾಧ್ಯ ಅನ್ನುವ ಕುರಿತು ಈ ಲೇಖನದಲ್ಲಿ ವಿವೇಚಿಸಲಾಗಿದೆ.**

**ಆಶಯ :**

**'ಮಾನವ ಜಾತಿ ತಾನೊಂದೆ ವಲಂ', – ಪಂಪ**
**ನುಡಿದರೆ ಮುತ್ತಿನ ಹಾರದಂತಿರಬೇಕು...ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು...।**
**ಇವನಾರವ ಇವನಾರವ ಎಂದೆನಿಸದಿರಯ್ಯಾ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ – ಬಸವಣ್ಣ**
**ಕಟ್ಟುವೆವು ನಾವು ಹೊಸ ನಾಡೊಂದನ್ನ, ರಸದ ಬೀಡೊಂದನ್ನ – ಅಡಿಗರು**
**"ಎಲ್ಲರಿಗು ಸಮಬಾಳು ಎಲ್ಲರಿಗೂ ಸಮಪಾಲು." " ಓ ನನ್ನ ಚೇತನ ಆಗು ನೀ ಅನಿಕೇತನ, ಎಲ್ಲ ಮತದ ಹೊಟ್ಟ ತೂರಿ ಎಲ್ಲ ತತ್ವಗಳನು ಮೀರಿ."**
**ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ – ಕುವೆಂಪು**
**ಒಂದಿರುಳ ಕನಸಿನಲಿ ನನ್ನವಳ ಕೇಳಿದೆನು ಚಂದ ನಿನಗಾವುದೆಂದು–ಕೆ.ಎಸ್.ನರಸಿಂಹಸ್ವಾಮಿ**
**'ನನ್ನವ್ವ ಫಲವತ್ತಾದ ಕಪ್ಪು ನೆಲ ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ; ಸುಟ್ಟಷ್ಟು ಕಸವು, ನೊಂದಷ್ಟು ಹೂ ಹಣ್ಣು, ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ'–ಪಿ.ಲಂಕೇಶ**
**ಕಟ್ಟತೇವ ನಾವು ಕಟ್ಟತೇವ ನಾವು ಕಟ್ಟೆ ಕಟ್ಟತೇವ**
**ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೆ ಕಟ್ಟತೇವ–ಸತೀಶ ಕುಲಕರ್ಣಿ**
**ನೆನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು, ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು–ಸಿದ್ಧಲಿಂಗಯ್ಯ**
**ನಾವು ದುಡಿಯುವ ಜನ, ನಮ್ಮ ಕೈಗೆ ಅಧಿಕಾರ ಬಂದಾಗ, ಪೋಲಿಸರನ್ನು, ನ್ಯಾಯಾದೀಶರನ್ನು ಮನುಷ್ಯರನ್ನಾಗಿ ಮಾಡುತ್ತೇವೆ– ರಂಜಾನ್ ದರ್ಗಾ**
**ಜಗದಗಲ ಹಬ್ಬಿದೊಂದು ಆಟ/ಅದೊಂದು ಮಹಾ ವಿರಾಟ/ಒಮ್ಮೆ ಹರಿಸಿದರೆ ತನ್ನ ನೋಟ/ನಡೆಸುವುದು ನಾಶದ ಉಗ್ರ ಹೋರಾಟ/ಗಡಿಯುದ್ದ ಸಿಡಿಗುಂಡಿನಾ ಸದ್ದು/ಮೀರುವುದು ಒಮ್ಮೊಮ್ಮೆ ಸರಹದ್ದು/ನಿಂತಿಹರು ಪಣ ತೊಟ್ಟು/ಮೋಸದಾ ಬಲೆ ಬಿಟ್ಟು/ ಆ ಭಯೋತ್ಪಾದಕತೆಯ ಪಟ್ಟು'.....। 'ಭವ್ಯ ಸಂಸ್ಕೃತಿಯ, ನಾಡಿನಲಿ ಹುಟ್ಟಿದ ಭಗೀರತರು ನಾವು; ದಿವ್ಯ ಕನಸನು ಕಾಣುತಲಿರುವರು' – ಆರ್.ವಿ.ಪಿ.**

## ಕನ್ನಡ ಕಾವ್ಯಗಳಲ್ಲಿ ಸಾಮಾಜಿಕ ಬದಲಾವಣೆ :

ಸಾಹಿತ್ಯ ಸಮಾಜದ ಕನ್ನಡಿ–ಸಮಾಜದ ಗತಿಬಿಂಬ ಮತ್ತು ಪ್ರತಿಬಿಂಬ. ಆಯಾಕಾಲದಲ್ಲಿ ಹುಟ್ಟಿದ ಶಾಸನವಾಗಲಿ, ಕಾವ್ಯಗಳಾಗಲಿ ಸಮಕಾಲೀನ ಸಾಮಾಜಿಕ ಜೀವನ ಮೌಲ್ಯಗಳನ್ನು ಒಳಗೊಂಡು ರಚನೆಯಾಗಿರುತ್ತವೆ. ಹಾಗೆ ಕಾಲಾತೀತವಾಗಿ ಸಮಾಜವನ್ನು ಆರೋಗ್ಯಯುತವಾಗಿ ನೋಡಿಕೊಳ್ಳುವ ವೈದ್ಯಕೀಯ ಕೆಲಸದೊಂದಿಗೆ, ಸುಧಾರಣಾತ್ಮಕವಾಗಿ ಬದಲಾಯಿಸುವ ಗುಣ ಹೊಂದಿರುತ್ತವೆ. ಸಾಹಿತ್ಯ ಒಂದು ದೇಶದ ಸಂಸ್ಕೃತಿಯನ್ನು ತಿಳಿಸುತ್ತದೆ. ಈ ಸಂಸ್ಕೃತಿ ವ್ಯಕ್ತವಾಗಲು ಶಾಸನವಾಗಲಿ, ಕಾವ್ಯವಾಗಲಿ ಪ್ರಮುಖ ಮಾಧ್ಯಮಗಳಾಗಿವೆ. ಕನ್ನಡದ ಬಗ್ಗೆ ತಿಳಿಯುವಾಗ ಇಲ್ಲಿಯ ಶಾಸನಗಳು ಜನಜೀವನವನ್ನು ಇದ್ದಕ್ಕಿದ್ದಂತೆ ಚಿತ್ರಿಸುತ್ತವೆ. ಸಾಮಾಜಿಕ–ಸಾಂಸ್ಕೃತಿಕ– ಧಾರ್ಮಿಕ ಅಧ್ಯಯನಕ್ಕೆ ಸಹಾಯವಾಗುತ್ತವೆ. ಹಾಗೆ ಸಾಹಿತ್ಯ ಮಾಧ್ಯಮ ಇಲ್ಲಿ ಕವಿಗಳು ತಮ್ಮ ಕಾಲದ ಸಮಾಜದ ಸಂಪೂರ್ಣ ವಾರಸುದಾರಿಕೆಯ ಹೊಣೆ ಹೊತ್ತು ಅದೇ ವಸ್ತುವಾಗಿಸಿಕೊಂಡು ಸರಳವಾಗಿ ಹೇಳಿರುತ್ತಾರೆ. ಪ್ರತಿಯೊಬ್ಬ ಕವಿಯು ಅಂದಿನ ಸಾಮಾಜಿಕ ಪರಿಸರದಲ್ಲಿ ಬದುಕಿರುವುದರಿಂದ ಅವರ ಸಮಕಾಲಿನ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಾಣಬಹುದು. ಕನ್ನಡ ಸಾಹಿತ್ಯದ ಪರಂಪರೆಯನ್ನು ಗಮನಿಸಿದರೆ ಅಂದಿನ ಯುಗಧರ್ಮಕ್ಕೆ ಅನುಗುಣವಾಗಿ ಕವಿಗಳು ಕಾವ್ಯದಲ್ಲಿ ಹೊಸ ಸಮಾಜವನ್ನು ಕಟ್ಟುವ ಮೌಲ್ಯಗಳನ್ನು ತಿಳಿಸುತ್ತಿರುತ್ತಾರೆ. ಜೊತೆಗೆ ಕನ್ನಡ ಸಾಹಿತ್ಯದ ಪ್ರಾಚೀನತೆಯಿಂದ ಇಲ್ಲಿಯವರೆಗೆ ಗಮನಿಸಿದರೆ, ಪ್ರಬಲವಾಗಿ ಮತ–ಧರ್ಮಯುಕ್ತ ಶಕ್ತಿ ಎದ್ದು ಕಾಣುವುದು ಗಮನಿಸತಕ್ಕ ಅಂಶ.

ಓದಿನ ಅನುಕೂಲಕ್ಕಾಗಿ ಆರ್.ಎಫ್.ಕಿಟಲ್, ಆರ್.ನರಸಿಂಹಾಚಾರ್, ಫ್ಲಿಟ್, ರೈಸ್, ಟಿ.ಟಿ.ಶರ್ಮಾ, ರಂ.ಶ್ರೀ.ಮುಗಳಿ ಮುಂತಾದ ವಿದ್ವಾಂಸರು ವಿಭಾಗಕ್ರಮ ಮಾಡಿರುವರು. ಹಾಗೆ ರಂ.ಶ್ರೀ.ಮುಗಳಿಯವರು 3ವಿಭಾಗಕ್ರಮ ಮಾಡಿದ್ದಾರೆ. ವೀರಯುಗ, ಭಕ್ತಿಯುಗ, ಸ್ವತಂತ್ರಯುಗ

ಇದನ್ನೆ ಧಾರ್ಮಿಕಯುಗ, ವೀರಯುಗ, ಭಕ್ತಿಯುಗ, ಆಧುನಿಕ ಯುಗವೆಂದು ವಿಂಗಡಿಸಿಕೊಂಡು ಆಯಾಕಾಲದ ಯುಗ ಧರ್ಮದಲ್ಲಿನ ಸಾಮಾಜಿಕ ಮೌಲ್ಯ, ಜೀವನ, ಧರ್ಮ, ಸಂಸ್ಕೃತಿ ಹೀಗೆ ಅಧ್ಯಯನ ಮಾಡಬಹುದು. ಈ ಕುರಿತು ಕಾವ್ಯಗಳು ಪೂರಕವಾಗಿ ದೊರೆಯುತ್ತವೆ.

ಕನ್ನಡ ಸಾಹಿತ್ಯವು ಸುಮಾರು ಎರಡು ಸಾವಿರ ವರ್ಷಗಳಷ್ಟು ಪ್ರಾಚೀನತೆ ಹೊಂದಿದೆ. ತನ್ನ ವಿವಿಧ ಆಯಾಮಗಳ ಮೂಲಕ ಇಂದು ಸಮೃದ್ಧವಾದ ಕಾವ್ಯ ಕೃಷಿ ಆಗಿರುವುದು. ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಕನ್ನಡವು ತನ್ನದೇ ಆದ ಅಸ್ಮಿತೆಯ ಮೂಲಕ ಘನ ವ್ಯಕ್ತಿತ್ವದ ವಿಶಿಷ್ಟತೆಯನ್ನು ಹೊಂದಿರುವುದು. ಕನ್ನಡ ಭಾಷಾ ಸಾಹಿತ್ಯದ ಸೃಷ್ಟಿಯಾಗಿರುವುದು. ತುಂಬಾ ವಿಭಿನ್ನ ಹಾಗೂ ಸಮಾಜೋಧಾರ್ಮಿಕವಾದ ನೆಲೆಗಟ್ಟಿನಲ್ಲಿ **"ಧರ್ಮ ಅಗ್ರಗಾಮಿಯಾಗಿ ಸಾಹಿತ್ಯ ಅನುಗಾಮಿಯಾಗಿ"** ಹುಟ್ಟಿ ಬಂದಿರುವುದು. ಕನ್ನಡ ಪ್ರಾಚೀನ ಕಾವ್ಯಗಳಷ್ಟು ಧರ್ಮ ಪ್ರಧಾನವಾಗಿದ್ದು, ಜೈನ ಕವಿಗಳು ಧರ್ಮದಲ್ಲಿ ನಿಂತು ಜೈನ ಧರ್ಮದ ತಿರ್ಥಂಕರರ–ಯತಿವರ್ಯರ, ಧಾರ್ಮಿಕ ಪುರುಷರು ಮಾಡಿದ ಅಧ್ಯಾತ್ಮಿಕ ಸಾಧನೆ, ಸಾಮಾಜಿಕ ಸುಧಾರಣೆಯನ್ನು ವಸ್ತುವನ್ನಾಗಿರಿಸಿಕೊಂಡು ಹಾಗೂ ಈ ಆಚಾರ್ಯಪುರುಷರನ್ನು ತಮ್ಮ ಕಥೆಯ ನಾಯಕರನ್ನಾಗಿ ಕಾವ್ಯಗಳನ್ನು ಬರೆದಿದ್ದಾರೆ.

ಪ್ರಾಚೀನ ಕನ್ನಡ ಶಾಸನಗಳನ್ನು ಗಮನಿಸಿದರೆ ಅಧ್ಯಾತ್ಮಿಕ ಸಾಧನೆಗೈದ ಯತಿಗಳ, ಆಚಾರ್ಯರ, ಧರ್ಮಪುರುಷರ ಜೀವನ ಸಾಧನೆ ಕುರಿತು ಉಲ್ಲೇಖಿಸುತ್ತಿವೆ. ಧಾರ್ಮಿಕ ಪುರುಷರನ್ನು ಕುರಿತು ಬರೆದಂತೆ ರಾಜ ತನ್ನ ಸಾಧನೆ, ಜೀವನ ಕುರಿತು ಬರೆಸಿಕೊಳ್ಳಲು ಪ್ರಾರಂಭಿಸಿದರು. ಹೀಗೆ ಧರ್ಮ–ರಾಜಕೀಯ–ಸಾಮಾಜಿಕ ವ್ಯವಸ್ಥೆಯ ಕುರಿತು ಶಾಸನ ಬರವಣಿಗೆ ಪ್ರಾರಂಭವಾಯಿತು. ಇದಕ್ಕೆ ಉದಾಹರಣೆ ಬದಾಮಿ ಶಾಸನದಲ್ಲಿ ಕಪ್ಪೆ ಅರಭಟನಂಥ ರಾಜನ ವರ್ಣನೆ ಬರುವುದು. ಅದೂ ಜನಪ್ರಿಯ ತ್ರಿಪದಿ ಸಾಹಿತ್ಯ ಪ್ರಕಾರದಲ್ಲಿ

**"ಸಾದುಗೆ ಸಾದು**
**ಮಾಧುರ್ಯಂಗೆ ಮಾಧುರ್ಯ**
**ಬಾದಿಪ ಕಲಿಗೆ ಕಲಿಯುಗ ವಿಪರೀತನ್**
**ಮಾಧವನೀತನ್ ಪೆರನಲ್ಲ"**

ಹೀಗೆ ಶಾಸನ ರಚನೆ ನಂತರ ರಾಜನ ಆಶ್ರಯ ಪಡೆದು ಕವಿಗಳು ರಾಜನನ್ನು ಕುರಿತು ಕಾವ್ಯ ರಚನೆ ಪ್ರಾರಂಭವಾದವು. ನಮಗೆ ಉಪಲಬ್ಧವಾದ ಮೊದಲ ಕಾವ್ಯಕೃತಿ. ಶ್ರೀವಿಜಯನ 'ಕವಿರಾಜಮಾರ್ಗ' ಹಾಗೂ ಹಲ್ಮಿಡಿ ಶಾಸನ ಕವಿರಾಜಮಾರ್ಗ(ಕ್ರಿ.ಶ.814–877) ಅಲಂಕಾರ ಶಾಸ್ತ್ರವಾದದ್ದು. ಇಲ್ಲಿ ಕನ್ನಡ ನಾಡಿನ ಜನಪದ ಸಮಗ್ರ ಜೀವನ ಮತ್ತು ಸಾಮಾಜಿಕ ಬದುಕಿನ ಚಿತ್ರಣಗಳನ್ನು ಹಾಗೂ ನಾಡವಿಸ್ತಾರ, ನಾಡುನುಡಿ–ಜನರ ಸ್ವಭಾವದ ಕುರಿತು ಅಭಿಮಾನದಿಂದ ಹೇಳಿದ್ದಾನೆ.

**"ಕಾವೇರಿಯಿಂದ ಗೋದಾವರಿವರೆಗೆ ಮಿರ್ದ**
**ನಾಡದಾ ಕನ್ನಡದೊಳ್"**
**ಭಾವಿಸದ ಜನಪದಂ ಎಂದು ಕನ್ನಡ ನಾಡಿನ ವಿಸ್ತಾರ ಹೇಳಿ–**

**ಪದನರಿದು ನುಡಿಯಲು**
**ನುಡಿದುದನ್ ಅರಿದು ಅರಿಯಲುಂ**
**ಆರ್ಪರ್ರ ಆ ನಾಡವರ್ಗಗಳ,**
**ಚದುರರರ ನಿಜದಿಂ,**

**ಕುರಿತೋದದೆಯೋ ಕಾವ್ಯ ಪ್ರಯೋಗ ಪರಿಣಿತ ಮತಿಗಳ(ಕ.ರಾ.ಮಾ.1–38)** ಅಂದರೆ ಸರಿಯಾಗಿ ಅರ್ಥವತ್ತಾಗಿ ತಿಳಿದು ಮಾತನಾಡುವ ಜನ ಕನ್ನಡಿಗರು ಓದದೆ ಇದ್ದರು, ಅಂದಿನ ಜನಪದರು ಕವಿಹೃದಯಿಗಳು ಎಂದು ಜನ ಸಾಮಾನ್ಯರ ಕುರಿತು ಹೇಳಿ ಅವರ ಜಾಣ್ಮೆ, ಬದುಕಿನ ರೀತಿಯನ್ನು ಸಾಮಾಜಿಕ ಚಿತ್ರಣವನ್ನು ತಿಳಿಸುತ್ತಾನೆ. ಸಜ್ಜನರು, ವೀರರು, ಗುಣವಂತರು, ಗಂಭೀರ ಸ್ವಭಾವದವರು ಹೀಗೆ ವಿವಿಧ ಸಾಮಾಜಿಕ ಸ್ತರದಲ್ಲಿ ಬದುಕುವ ಗುಣಸ್ವಭಾವದ ಜನರನ್ನು ತನ್ನ ಕಾವ್ಯದ ಮೂಲಕ ಇಂದು ಅಂದಿನ ಹಾಗೆ ಕನ್ನಡಿಗರು ಇರವ ರೀತಿಯಲ್ಲಿ ಇರಬೇಕು, ಬದಲಾವಣೆಯಾಗ ಬೇಕೆಂಬ ಬಯಕೆಯಿಂದ ಚಿತ್ರಿಸಿದ್ದಾನೆ. ಕವಿರಾಜ ಮಾರ್ಗದ ನಂತರ ನೇರವಾಗಿ ಪಂಪನ ಕಾವ್ಯಗಳು ಪೂರ್ಣವಾಗಿ ಸಿಗುತ್ತವೆ. ಪಂಪ ಆದಿಕವಿ ಈತನ ಆದಿಪುರಾಣ ಮೊದಲಕಾವ್ಯವಾಗುತ್ತದೆ. ಪಂಪನ ಕಾಲವನ್ನು ವೀರಯುಗವೆಂದು ಸಾಮಾಜಿಕ, ರಾಜಕೀಯವಾಗಿ ನೋಡಬಹುದು. ಆದಿಪುರಾಣದಲ್ಲಿ ಬರುವ ವಜ್ರಜಂಗ ಶ್ರೀಮತಿಯರ ವಿವಾಹ ನಂತರ ಶ್ರೀಮತಿಯ ತಂದೆ ಮಗಳು ಮತ್ತು ಅಳಿಯನಿಗೆ ಹೇಳುವ ಸಲಹೆ ಬುದ್ದಿಮಾತು ಇಂದಿನ ಸಮಾಜಕ್ಕೂ ಪ್ರಸ್ತುತವಾಗುವುದು. ಮಗಳಿಗೆ ಭಯಭಕ್ತಿಯಿಂದ ಬದುಕಬೇಕೆಂದು ಹೇಳಿ, ಅಳಿಯನಿಗೆ ಮಗಳು ಚಿಕ್ಕವಳು ತಿಳಿಯದೆ ಏನಾದರೂ ತಪ್ಪು ಮಾಡಿದರೆ ತಿಳಿ ಹೇಳಿ ಎಂದು ಹೇಳಿರುವ ರೀತಿ ಸರ್ವಕಾಲಿಕ ಸಮಾಜಕ್ಕೆ ಪಂಪ ಸುಂದರವಾಗಿ ಈ ಮೂಲಕ ತಿಳೀಸಿಕೊಟ್ಟಿದ್ದಾನೆ. ಹೀಗೆ **"**ಜನಜೀವನವನ್ನು ಪ್ರೇರಿಸುತ್ತಿದ್ದ ಮಾರ್ಗದರ್ಶನ ಮಾಡುವ ಮೌಲ್ಯಗಳು ನನ್ನಿ ತ್ಯಾಗ, ಸ್ವಾಮಿ ನಿಷ್ಠೆ, ಅಭಿಮಾನ, ಶೌರ್ಯ, ಅರಿವು, ಛಲ, ಅಣ್ಮು, ಶರಣ್ಬುಗೆ ಕಾವುದು**" (ಎಂ.ಚಿದಾನಂದ ಮೂರ್ತಿ 'ಸಂಶೋಧನ ತರಂಗ'–1966 ಪುಟ4)** ಇಂಥ ಸಮಕಾಲೀನ ಸಾಮಾಜಿಕ ಮೌಲ್ಯಗಳು ವಿಕ್ರಮಾರ್ಜುನ ವಿಜಯದಲ್ಲಿ ಹೇಳಿರುವನು.

ಶಂತನು ಮಹಾರಾಜ ಸತ್ಯವತಿಯನ್ನು ನೋಡಿ 'ಬಾ ಪೋಪೆಂ ಯನ್ನರಮನೆಗೆ' ಎಂದಾಗ 'ತತ್ಕನಿಕೆ ಮೆಲ್ಲನೆ ನಾಚಿ ನೀರಾಗಿ ಬೇಡುವಡೆ ಎನ್ನ ಅಯ್ಯನನ್ನು ಬೇಡಿರಿ' ಎಂದು ಸತ್ಯವತಿ ಹೇಳುವ ಸಮಯೋಚಿತ ಮಾತು ಇಂದಿನ ಸಾಮಾಜಿಕ ಬದಲಾವಣೆಗೆ ಯೋಗ್ಯ ಉದಾಹರಣೆಯಾಗಿದೆ. ರಾಜನೇ ಕೈ ಹಿಡಿದು ಬಾ ಎಂದು ಕರೆದಾಗ ನಮ್ಮ ತಂದೆಯನ್ನು ಕೇಳಿ ಎಂಬ ಮಾತಿನಲ್ಲಿ ಎಲ್ಲ ಕಾಲಕ್ಕೂ ಒಪ್ಪಿತವಾಗುವಂತ ಮೌಲ್ಯವನ್ನು ಕಾಣಬಹುದು. ಕರ್ಣ–ಕುಂತಿಯ ಭೆಟ್ಟಿ ತಾಯಿ ಮಗನ ವಾತ್ಸಲ್ಯ ತಮ್ಮಂದಿರರಿಗಾಗಿ "ಎನ್ನನೆ ರಣದೊಳ ಅಳಿವೆಂ'

ಎಂದು ಕರ್ಣ ಹೇಳುವ ತ್ಯಾಗದ ಸಂದರ್ಭ, ದುರ್ಯೋಧನನ ಸ್ವಾಭಿಮಾನ, ಭೀಷ್ಮರ ಸಲಹೆ, ಭೀಮ-ದುರ್ಯೋಧನರ ದ್ವೇಷ, ದೌಪದಿಯನ್ನು ಧರ್ಮರಾಯರಿಗೆ ಬಿಟ್ಟು, ಸುಭದ್ರೆ-ಅರ್ಜುನರಿಗೆ ಪಟ್ಟಾಭಿಷೇಕ, ಅರಿಕೇಸರಿ-ಅರ್ಜುನರ ಸಮಾಗಮದೊಂದಿಗೆ ಸಾಮಾಜಿಕ ಮೌಲ್ಯಗಳನ್ನು ಪಂಪ ತುಂಬಾ ಜಾಣ್ಮೆಯಿಂದ ಚಿತ್ರಿಸಿದ್ದಾನೆ. ಪ್ರೌಢ ಗಂಭೀರವಾದ ಇತಿಹಾಸಯುಕ್ತ ವಸ್ತು ಇದ್ದರೂ ಅದರಲ್ಲಿ ದೇಶಿಯತೆಯೊಂದಿಗೆ ತನ್ನ ಕಾಲದ ಸಮಾಜದ ಜನಪದರ ನಡುವಳಿಕೆಗಳ ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗುತ್ತವೆ. ಅರ್ಜುನ, ಕರ್ಣ, ಭೀಷ್ಮ ಉದಾತ್ತ ವ್ಯಕ್ತಿಗಳ ಮೂಲಕ ಸಾಮಾನ್ಯರ ಮನಸ್ಸಿನಲ್ಲಿರುವ ಪಾತ್ರಗಳನ್ನು ಕೆತ್ತಿ ನಿಲ್ಲಿಸಿದ್ದಾನೆ. ಆ ಪಾತ್ರಗಳ ಆಲೋಚನೆ, ತ್ಯಾಗ, ರೋಷ-ದ್ವೇಷ, ಪ್ರೀತಿ ಸಾಮಾನ್ಯನಲ್ಲಿ ಸಹಜವಾಗಿ ಕಾಣಿಸುವಂತೆ ಸಾಮಾನ್ಯ ಜನ ರನ್ನ ಪೂರಕವಾಗಿ 18 ವರ್ಣನೆಗಳಲ್ಲಿ ವೇಶ್ಯಾವಾಟಿಕೆ ಸಮಾಜದ ಒಂದು ವರ್ಗದ ಯಥಾವತ್ತ ಚಿತ್ರಣವಿದೆ. ದೇವತಾರಾಧನೆ ಹಾಗೆ ಅಂದಿನ ಯುಗದ ಸಂದರ್ಭದ ಹಿಂದಿನ ರಾತ್ರಿ ಸತಿಪತಿಗಳಿಬ್ಬರ ಸಂಭಾಷಣೆ ಹೀಗಿದೆ.

**'ಈ ಹೊತ್ತೇ ಹೊತ್ತು**
**ನಾಳೆ ನಾನು**
**ದೇವಲೊಕದ ಕನ್ಯಕೆಯರ ಸಭೆಯಲ್ಲಿರುತ್ತೇನೆ' ಎನ್ನುತ್ತಾನೆ ನಲ್ಲ.**
**ಅದಕ್ಕೆ ನಲ್ಲಳು ಹೇಳುತ್ತಾಳೆ:**
**'ನೀನೆಂದ ಹಾಗೆ,**
**ಆಗುವುದಿಲ್ಲ ಮತ್ತೆ ಬಂದು ನಾಳೆ ಸಂಜೆ ನನ್ನೊಡನೆ ಕೂಡುತ್ತೀಯ.'**

**ಅದು ನಿನಗೆ ಹೇಗೆ ಗೊತ್ತು?** **'ಗೊತ್ತು, ನನಗೆ ಓಲೆ ಭಾಗ್ಯ ಉಂಟು' (ವಿಕ್ರಮಾರ್ಜುನ ವಿಜಯಂ, ವಚನ 10-44)** ಇಲ್ಲಿ ಓಲೆ-ಭಾಗ್ಯ ಸಾಮಾನ್ಯರ ನಂಬಿಕೆ ಸಮಾಧಾನ ಸುಖ ಸಂಸಾರದ ಸಾಮಾಜಿಕ ಚಿತ್ರಣ ಕಾಲಾತೀತವಾಗಿರುವುದು ಕಾಣಬಹುದು. ಹಾಗೆ ರನ್ನನ ಕಾವ್ಯದಲ್ಲಿ ಇದೆ ರೀತಿ ಮುಂದುವರೆದಿದೆ. ಪೊನ್ನನಲ್ಲಿ ತನ್ನ ಆಶ್ರಯದಾತ ರನ್ನ ನೆನೆಸಿ ಕೃತಾರ್ಥರಾಗುವುದರೊಂದಿಗೆ ಸಮಕಾಲೀನ ನಂಬಿಕೆ, ಸತ್ಯ, ನ್ಯಾಯ, ಸಂಸ್ಕೃತಿ ತಮ್ಮ ಸುತ್ತಣ ಜನಜೀವನವನ್ನು ಮತ್ತು ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಮಾಜವನ್ನು ಕೈ ಹಿಡಿದು ನಡೆಸಿದ್ದಾರೆ. ನಯಸೇನ, ಬ್ರಹ್ಮಶಿವ, ವಚನಕಾರರು, ದಾಸರು, ಸರ್ವಜ್ಞ ತತ್ವಪದಕಾರರು ಆಧುನಿಕ ಕವಿಗಳು ತಮ್ಮ ಕಾವ್ಯದ ಮೂಲ ವಸ್ತು ಸಮಾಜ. ಈ ಕವಿಗಳ ಉದ್ದೇಶ ಹೊಸ ಸಮಾಜದ ನಿರ್ಮಾಣವಾಗಿದೆ.

ನಯಸೇನನ ಧರ್ಮಾತ್ಮ ಕಾವ್ಯದಲ್ಲಿ ಸಮಗ್ರ ಸಾಮಾಜಿಕ ಚಿತ್ರಣಗಳು ಸಿಗುತ್ತವೆ. ಇದರಲ್ಲಿ ಹೇಳದೇ ಇರುವ ವಿಷಯಗಳ ಇಲ್ಲ. ಮಹೇಂದ್ರ ರಾಜನ ಮಂತ್ರಿ ಕುಬೇರ **'ಸರ್ವರುಜಾಪಹಾರಿ'** ಮಾವಿನ ಹಣ್ಣನ್ನು ತಂದು ರಾಜನಿಗೆ ಕೊಡುವುದು . ರಾಜ ಅದನ್ನ ಬಿತ್ತಿಸಿ ಮರವಾಗಿಸಿ ಮೊದಲ ಹಣ್ಣನ್ನು ಸರ್ಪ ತಿಂದಿದ್ದು ತಿಳಿಯದೆ ಮಗನಿಗೆ ಕೊಡುವುದು, ಮಗ ಸತ್ತನೆಂದು-ಮಾವಿನ ಮರ ಕಡಿಸಿ ಕುಬೇರನನ್ನು ಶಿಕ್ಷಿಸುವುದು. ಆಗ ರೋಗರುಜಿನದಿಂದ ಬಳಲುವ ಕುರುಡರು. ಕುಂಟರು, ರೋಗಿಗಳು ಕಡಿದ ಮಾವಿನ ಗಿಡದಲ್ಲಿದ್ದ ಹಣ್ಣು-ಕಾಯಿ ತಿಂದು ಸುವರ್ಣಮಯವಾಗಿ ರೋಗಮುಕ್ತರಾಗುವುದು. ಇದನ್ನು ನೋಡಿ ರಾಜ ಪ್ರಾಯಶ್ಚಿತಕ್ಕೊಳಗಾಗುವುದು-ಹೀಗೆ ಇಲ್ಲಿ ರಾಜ ಸ್ವಾರ್ಥ ಬಿಟ್ಟು ಪ್ರಜೆಗಳ ರೋಗ ಅಂಗವೈಕಲ್ಯತೆ ಪರಿಹಾರಕ್ಕೆ ಬಳಸಿಕೊಳ್ಳುವ ಸಂದರ್ಭ ಇಂದಿನ ರಾಜ ಪ್ರಭುಗಳಿಗೆ ನಿಸ್ವಾರ್ಥ ಬುದ್ದಿ ಕಲಿಯಲು, ಆ ರಾಜನಂತೆ ಇರಬೇಕಾದ ಗುಣ ಇಲ್ಲಿ ಸಿಗುತ್ತವೆ. ಇಂಥ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುಣ ಇಂದಿನವರು ಕಲಿಯುವ ಅಂಶಗಳನ್ನು ಕನ್ನಡ ಕಾವ್ಯಗಳು ಒಳಗೊಂಡಿವೆ. ಅಂದು ಸಾಮಾಜಿಕ ಪಿಡುಗುಗಳ ಕುರಿತು ಆಲೋಚನಾಕ್ರಮ ಕುರಿತು ತಿಳಿಯಬಹುದು ಹಾಗೆ ವ್ಯಾಪಾರ, ಯುದ್ಧ-ಆಯುಧಗಳು, ವ್ರತ ಮಾಡುವ ಯೋಧರು, ವೇಶ್ಯೆಯರು, ವ್ಯವಸಾಯ, ಚಿತ್ರಕಲೆ, ಹನ್ನೆರಡುಕೋಲಿನ ಹರಿಗೋಲು, ದೋಣಿ ವಿಹಾರ, ಪ್ರಾಣಿ-ಪಕ್ಷಿ-ಗಿಡ-ಮರ, ಅಡುಗೆಗಳು, ನಂಬಿಕೆಗಳು, ಕುಂಟರು, ಕುರುಡರು, ಸಮಾಜದ ವೈಪರಿತ್ಯಗಳು, ನಾನಾ ವೃತ್ತಿ, ಜಾತಿ, ಧರ್ಮ-ಸಂಪ್ರದಾಯಗಳು ಹೀಗೆ ಹಲವಾರು ವಿಷಯಗಳು ಕನ್ನಡ ಕಾವ್ಯಗಳಲ್ಲಿ ನೋಡಲು ಸಿಗುತ್ತವೆ. ಹಾಗಾಗಿಯೇ **"ಎಂ.ಚಿದಾನಂದ ಮೂರ್ತಿಯವರು 'ಧರ್ಮಾಮೃತವು' ಸಾಮಾಜಿಕ ಇತಿಹಾಸದ ವಿದ್ಯಾರ್ಥಿಗಳಿಗೆ ಒಂದು ದೊಡ್ಡಗಣಿಯಂತಿದೆ ಎಂದಿದ್ದಾರೆ."** ಹಾಗೆ ಜನ್ನನ ಯಶೋಧರ ಚರಿತ್ರೆಯಲ್ಲಿ ಯಶೋಧರ ರಾಜ-ಅಮೃತಮತಿ ದಾಂಪತ್ಯದ ಸಂದರ್ಭ. ರಾಜ್ಯದ ಪಟ್ಟದಾನೆಯ ಸೇವಕ ಮಾವುತನಾದ ಅಷ್ಟಾವಂಕನ ಹಾಡುಕೇಳಿ ಅಮೃತಮತಿ ಆತನನ್ನು ಪ್ರೀತಿಸುವುದು. ಈ ಅನೈತಿಕ ಸಂಬಂಧ ತಿಳಿದ ಯಶೋಧರ ಮಹಾರಾಜ ಸಂಕಲ್ಪ ಹಿಂಸೆ ಮಾಡುವುದು. ಕನಸಿನ ಸಂದರ್ಭ ಇವೆಲ್ಲ ಸಮಕಾಲೀನ ಸಮಾಜದ ಒಳತಲ್ಲಣಗಳು, ಅನೈತಿಕ ಸಂಬಂಧಗಳು, ಹೆಣ್ಣಿನ ಧರ್ಮಬಾಹಿರ ಕಾರ್ಯಗಳು ಸಮಾಜಕ್ಕೆ ಮುನ್ನೆಚ್ಚರಿಕೆಯ ಕ್ರಮಗಳಾಗಿವೆ. ಇದೇ ರೀತಿ ಅನಂತನಾಥ ಪುರಾಣದಲ್ಲಿ ಚಂಡಶಾಸನ ವಸುಶೇಣರ ಸ್ನೇಹ-ಬಾಂಧವ್ಯ ಚಂಡಶಾಸನ ಸ್ನೇಹಿತನಾದ ವಸುಶೇಣನ ಹೆಂಡತಿ ಸುನಂದಾಳನ್ನು ಅಪಹರಿಸಿ ಯುದ್ಧಕ್ಕೆ ನಿಲ್ಲುವುದು ಹೀಗೆ ಮೋಹ, ಪ್ರೀತಿ, ತ್ಯಾಗ-ದ್ವೇಷ, ಯುದ್ಧ ಗಂಡಿನ ಧರ್ಮಬಾಹಿರ ಕಾರ್ಯಗಳು ಅಂದಿನ ಸಾಮಾಜಿಕ ಸ್ಥಿತಿಗತಿಗಳಿಗೆ ಹಿಡಿದ ಕನ್ನಡಿಯಾಗಿವೆ. ಇವೆಲ್ಲ ನಡೆಯುವುದರಿಂದ ಆಗಬಹುದಾದ ದುರಂತ ಮತ್ತು ಅದರ ಲಾಭ, ನಷ್ಟಗಳ ಕುರಿತು ತಿಳಿಸುತ್ತವೆ. ಈ ಮೂಲಕ ಮುಂದೆಂದು ಇಂಥ ಘಟನೆಗಳು ಮರುಕಳಿಸದಂತೆ ಸಮಾಜಕ್ಕೆ ಕಾವ್ಯಗಳಲ್ಲಿಯ ಇಂಥ ಘಟನೆ, ಸಂದರ್ಭಗಳು ಮಾರ್ಗ ಸೂಚಿಯಾಗಿ ನಿಲ್ಲತ್ತವೆ. ಹೀಗೆ ಹಳಗನ್ನಡ ಕಾವ್ಯದಲ್ಲಿ ಕವಿಗಳ ತಮ್ಮ ಕಾಲದ ಸಾಮಾಜಿಕ ಚಿತ್ರಣದೊಂದಿಗೆ ಮೌಲ್ಯಯುತ ಪ್ರಜ್ಞೆ ಬೆಳೆಸಿ ಸಾಮಾಜಿಕ ಬದಲಾವಣೆಗೆ ಶ್ರಮಿಸಿದ್ದಾರೆ. ಆ ನಿಟ್ಟಿನಲ್ಲಿ ಪ್ರಾಚೀನದಿಂದ ಇಲ್ಲಿಯವರೆಗೂ ಕನ್ನಡ ಕವಿಗಳು ಸಮಾಜವನ್ನು ಸುಧಾರಿಸಲು ನಿಷ್ಣಾತರಾಗಿದ್ದಾರೆ.

11-12ನೇ ಶತಮಾನವಂತೂ ಸಮಾಜಮುಖಿಯಾದ ಸಾಹಿತ್ಯ ಹುಟ್ಟಿಕೊಂಡಿತು. ಶಿವಶರಣರು ಪಾರಂಪರಿಕ ಮೌಢ್ಯತೆಯಿಂದ ತಾಂಡವವಾಡುತ್ತಿದ್ದ ಜಿಡ್ಡುಗಟ್ಟಿದ ಸಮಾಜವನ್ನು ಸ್ವಚ್ಛಗೊಳಿಸುವಲ್ಲಿ ವಚನಗಳು ನವಸಮಾಜದ ದಿವ್ಯ ಮಂತ್ರಗಳಾಗಿವೆ. ಜೇಡರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಮೋಳಗಿ ಮಾರಯ್ಯ, ಮುಕ್ತಾಯಕ್ಕ, ಸಿದ್ಧರಾಮ ಹೀಗೆ ನೂರಾರು ಶರಣರು ಸಾವಿರಾರು ವಚನಗಳನ್ನು ಬರೆದು ಈ ಮುಖೇನ ಸಾಮಾಜಿಕ ಬದಲಾವಣೆಗೆ ಶ್ರಮಿಸಿದರು. ಬಸವಣ್ಣನವರ ವಚನಗಳಲ್ಲಿ ಸಮಾಜ ಸುಧಾರಣೆಯ ಸಪ್ತಸೂತ್ರಗಳನ್ನು ನೋಡಬಹುದು.

**ಕಳಬೇಡ ಕೊಲಬೇಡ/**

**ಹುಸಿಯ ನುಡಿಯಲು ಬೇಡ/**

**ಅನ್ಯರ ಕಂಡು ಅಸೂಯೆ ಪಡಬೇಡ/**

**ತನ್ನ ಬಣ್ಣಿಸ ಬೇಡ ಇದಿರ ಹಳಿಯಲು ಬೇಡ/**

**ಮುನಿಯ ಬೇಡ**

**ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ/**

**ಇದೇ ನಮ್ಮ ಕೂಡಲಸಂಗಮದೇವನೊಲಿಯುವ ಪರಿ.**

ಹೀಗೇಯೇ ವ್ಯಕಿಯಿಂದ ಸಮಾಜವನ್ನು ತಿದ್ದಲು ಹೊರಟ ಶರಣರು, **ಲೋಕದ ಡೊಂಕು ನೀವೇಕೆ ತಿದ್ದುವಿರಿ?/ನಿಮ್ಮ-ನಿಮ್ಮ ತನುವ ಸಂತೈಸಿಕೊಳ್ಳಿ/ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,** ಎಂದು ತಿದ್ದಲು ಹೊರಟರು. ಹೀಗೆ ಮಾನವ ತನ್ನನ್ನು ತಾನು ಸರಿಪಡಿಸಿಕೊಂಡಾಗ ತಾನು ಬದುಕುತ್ತಿರುವ ಸಮುದಾಯ, ಸಮಾಜ ಬದಲಾವಣೆಯಾಗುವುದು ಎಂಬ ಆಶಯ ಇದಾಗಿದೆ. ಅಲ್ಲಮ ಪ್ರಭುದೇವರು ತಮ್ಮ ವಚನಗಳಲ್ಲಿ

**'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು/**

**ಕುದುರೆಯನೇರ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ,**

ಎಂದು ಹೇಳಿ ಇರುವುದನ್ನು ಸರಿಪಡಿಸಿಕೊಳ್ಳುವ ರೀತಿಯನ್ನು ದೇಹ ಮನಸ್ಸು, ಸಮಾಜ ನಿಯಂತ್ರಣದ ಸಂದೇಶವನ್ನು ಸಾರಿದ್ದಾರೆ. ಅಕ್ಕ ಮಹಾದೇವಿ ಸಮಾಜವನ್ನು ಕುರಿತು ಹೇಳಿದ ವಚನವಿದು.

**ಬೆಟ್ಟದಾ ಮೇಲೊಂದು ಮನೆಯ ಮಾಡಿ**

**ಮೃಗಗಳಿಗಂಜಿದೊಡೆಂತಯ್ಯಾ/**

**ಸಂತೆಯಲ್ಲೊಂದು ಮನೆಯ ಮಾಡಿ**

**ಶಬ್ದಕ್ಕೆ ನಾಚಿದೊಡೆಂತಯ್ಯಾ/**

**ಸಮುದ್ರದ ತಟಿಯಲ್ಲೊಂದು ಮಾಡಿ**

**ನೆರೆತೊರೆಗಳಿಗಂಜಿದೊಡೆಂತಯ್ಯಾ/**

**ಸಮಾಜದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆ ಬಂದೊಡೆ**

**ಕೋಪವ ತಾಳದೆ ಸಮಾಧಾನಿಯಾಗಿರಬೇಕು.**

ಸಮಾಜದಲ್ಲಿ ಹುಟ್ಟದ ಬಳಿಕ ಒಂದಿಲ್ಲ ಒಂದು ತೊಂದರೆಗಳು ಇರುವುದು ಸಹಜ, ತಾಳ್ಮೆಯಿಂದ ಜೀವನ ನಡೆಸಬೇಕು ಎಂದು ಸಾಮಾಜಿಕ ಜೀವನದಲ್ಲಿ ಇರುವವರಿಗೆ ಕಿವಿಮಾತು ಹೇಳಿರುವಳು. ಹೀಗೆ ಶರಣರು ತಮ್ಮ ವಚನ, ಉಕ್ತಿಗಳ ಮೂಲಕ ಜಾತಿ, ಲಿಂಗಭೇದ, ದೇವರು, ಜ್ಞಾನ, ಭಕ್ತಿ, ಆತ್ಮ ವಿಮರ್ಶೆ, ಸಮಾಜ ಸುಧಾರಣೆಯ ಕುರಿತು ವಚನಗಳ ಮೂಲಕ ಪರಿವರ್ತಿಸಿದರು. ಹರಿಹರ ರಾಘವಾಂಕಾದಿಗಳ ಭಕ್ತಿಯ ತಳಹದಿ ಮೇಲೆ ಸಮಾಜ ಸುಧಾರಣೆ ಮಾಡಲು ಕಾವ್ಯ ರಚಿಸಿದರು. ಹರಿಹರ ನೂರೊಂದು ರಗಳೆ-ಅಷ್ಟಕ-ಶತಕ-ಚಂಪೂ ಕಾವ್ಯ, ಗಿರಿಜಾ ಕಲ್ಯಾಣ ಬರೆದ. ಬಸವರಾಜ ದೇವರ ರಗಳೆಯಂತ ಶರಣರ ಚರಿತ್ರೆಯೊಂದಿಗೆ ಹೊಸ ಸಮಾಜ ಪ್ರವರ್ತಕರ ಮಾದರಿ ಕಟ್ಟಿಕೊಟ್ಟಿದ್ದಾನೆ. ರಾಘವಾಂಕ ಸತ್ಯವನ್ನು ಇಟ್ಟುಕೊಂಡು ಹರಿಶ್ಚಂದ್ರ ಕಾವ್ಯ ಬರೆದ. ಹರೀಶ್ಚಂದ್ರನ ಸಮಾಜಮುಖಿ ಜೀವನ ನಿಷ್ಠೆ, ಸತ್ಯಜೀವನದ ಮೌಲ್ಯಗಳು ಇಂದಿಗೂ ಪ್ರಸ್ತುತ ಈ ಮೂಲಕ ಸಮಾಜಕ್ಕೆ ಹೊಸ ಸಂದೇಶ ನೀಡಿದ್ದಾನೆ. ಲಕ್ಷ್ಮೀಶ-ರತ್ನಾಕರವರ್ಣಿ ರಾಘವಾಂಕ ಮುಂತಾದ ಕವಿಗಳ ತಮ್ಮ ಸಮಕಾಲೀನ ಸಾಮಾಜಿಕ ಚಿತ್ರಣ ಹಾಗೂ ಇಂದಿನ ಸಾಮಾಜಿಕ ಬದಲಾವಣೆಗೆ ಬೇಕಾದ ಅಶಗಳನ್ನು ಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂಚಿ ಹೊನ್ನಮ್ಮ ಮಹಿಳೆಯರ ಪಾವಿತ್ರ್ಯತೆ ಕುರಿತು ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪತಿವ್ರತಾ ಮನೋಧರ್ಮ ಬೆಳೆಸಿ ಸಮಾಜದ ಸ್ವಾಸ್ಥ್ಯ ಕಾಪಾಡಲು ಮುಂದಾಗಿದ್ದಾಳೆ.

**ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ**

**ತಾಯಿ।ಪೆಣ್ಣಲ್ಲವೆ ಪೊರೆದವಳು।,**

**ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು।**

**ಕಣ್ಣು ಕಾಣದ ಗಾವಿಲರು।**

ಎಂದು ಸಮಾಜದಲ್ಲಿ ಹೆಣ್ಣಿನ ಶೋಷಣೆಯನ್ನು ನಿವಾರಿಸಿ ಸಮಾನತೆಗಾಗಿ ಕಾವ್ಯದ ಮೂಲಕ ಧ್ವನಿ ಎತ್ತಿದ್ದಾಳೆ. ಹೆಣ್ಣು ಗಂಡು ತಾರತಮ್ಯ ಬೇಡ **'ಕುವರನಾದೊಡೆ ಬಂದ ಗುಣವೇನದರಿಂದ। ಕುವರಿಯಾದೊಡೆ ಕುಂದೇನು।'** ಎಂದು ಲಿಂಗ ಭೇದವನ್ನು ಹೋಗಲಾಡಿಸುವಲ್ಲಿ ಕ್ರಾಂತಿಯನ್ನೆ ಮಾಡಿರುವಳು. ಹೀಗೆ ಸಮಾಜದಲ್ಲಿ ಮಾನವ ಸಂಬಂಧಗಳ ಹೆಣ್ಣು–ಗಂಡಿನ ಅಪವಿತ್ರತೆಯಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗುವುದನ್ನು ತಡೆಗಟ್ಟಲು ಪಣತೊಟ್ಟ ಹೊನ್ನಮ್ಮ ಮಹಿಳೆಯರನ್ನು ತಿದ್ದಿ–ತೀಡಿ ಅವರಿಗೆ ತಿಳುವಳಿಕೆ ಹೇಳಲು ಸಾಮಾಜಿಕ ಬದಲಾವಣೆಗೆ ಕಂಕಣ ತೊಟ್ಟು ನಿಂತಿದ್ದಾಳೆ. ಪುರಂದರದಾಸರು, ಕನಕದಾಸರು ಜಾತಿ–ಕುಲ ಸಮಾನತೆಯನ್ನು ಭೇದಿಸುತ್ತಾ **'ಮಾನವ ಜನ್ಮ ದೊಡ್ಡದು ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ'** ಎಂದು ಮನುಷ್ಯನನ್ನು ತಿದ್ದಿ, ಎಚ್ಚರಿಸಿ ಸದೃಢ ಸಮಾಜ ಕಟ್ಟಲು ಹೊರಟರು. ಕನಕದಾಸರು **'ಕುಲಕುಲವೆಂದು ಬಡಿದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರು ಬಲ್ಲಿರಾ...!** ಎಂದು ಸಮಾನತೆಯ ತತ್ವವನ್ನು ಬೋಧಿಸುತ್ತಾ, ಭಕ್ತಿಯ ಮೂಲಕ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಿದರು. 'ರಾಮಧಾನ್ಯ ಚರಿತೆ'ಯಂತ ಕೃತಿ ಸಮಾಜದ ಬದಲಾವಣೆ ಶ್ರೇಷ್ಠ ಮಾದರಿ ಕೃತಿಯಾಗಿದೆ. ತತ್ವಪದಕಾರರಾದ ಕಡಕೋಳು ಮಡಿವಾಳಪ್ಪ, ಮುಪ್ಪಿನ ಷಡಕ್ಷರಿ, ಶಿಶುನಾಳ ಶರೀಫರಂತಹ ತತ್ವಪದಕಾರರು ಸಾಮಾಜಿಕ ಸುಧಾರಣೆಗಾಗಿ ನಾನಾ ರೀತಿಯ ತತ್ವ ಗೀತೆಗಳಿಂದ ಸಮಾಜಮುಖಿ ಚಿಂತನೆ, ಸರ್ವಸಾಮಾನ್ಯನಿಗೆ ಅರಿವನ್ನು ಮೂಡಿಸುವತ್ತ ತಮ್ಮ ಅನುಭಾವದ ತತ್ವಗಳನ್ನು ಸಾರಿದ್ದಾರೆ. ಶಿಶುನಾಳ ಶರೀಫರು,

**ಸೋರುತಿಹುದು ಮನೆಯ ಮಾಳಿಗಿ।**

**ಮಳೆ ಗಾಳಿಗೆ ನೆನೆನೆನೆದು/**

**ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ...!** ಎಂದು.

**ಗುಡಿಯ ನೋಡಿರಣ್ಣ ।**

**ದೇಹದ ಗುಡಿಯ ನೋಡಿರಣ್ಣ, /**

**ಗುಡಿಯ ನೋಡಿರಿದು ಪೊಡವಿಗೆ/,**

**ಒಡೆಯನು ಅಡಗಿಕೊಂಡು ಕಡು ಬೆಡಗಿನೊಳಿರುತಿ ಎಂದು. ಹಾಗೆಯೇ** ಗೋನಾವರದ ರಾಮದಾಸ(ಬಡೇಸಾಬ)

**ಜಾತಿಭ್ರಷ್ಟ ಹೊಲೆಮಾದಿಗರಿವರಲ್ಲವೇನೋ/**

**ನೀತಿಬಾಹಿರರಾಗಿ ಆಚರಿಸುವವರು/**

**ಜ್ಞಾನಿಗಳು ಬಂದರೆ ಗೋಣೆತ್ತಿ ನೋಡದೆ/**

**ಹೀನಜನರಿಗೆ ಬಹುಮಾನ ಕೊಡುವವರು/**

**ಧ್ಯಾನ ದಾಸರ ತೆರದಿ ಜ್ಞಾನದ ಮತ್ತೇಳಿ ಗೇಣೊಟ್ಟಿಗೆ ಪರರ ಗೋಣು ಮುರಿವವರು** ಎಂಬಂತಹ ಹಾಡುಗಳನ್ನು ಹಾಡುವುದರೊಂದಿಗೆ ಜ್ಞಾನ ಮಾರ್ಗದ ದಾರಿ ತೋರಿ ಸಾಮಾಜಿಕ ಬದಲಾವಣೆಗೆ ದುಡಿದಿದ್ದಾರೆ. ಹೀಗೆ ಕಾಯಕ, ಭಕ್ತಿ, ವೈರಾಗ್ಯಯುತರಾಗಿ ಕಾವ್ಯ ರಚನೆಯೊಂದಿಗೆ, ಸಾಮಾಜಕ್ಕೆ ಕಳಕಳಿಯಿಂದ ತಿಳುವಳಿಕೆ ಹೇಳಿ ಸ್ವಚ್ಛ ಆರೋಗ್ಯಯುತ ಮನಸ್ಸಿನ ಸಾಮಾಜಿಕ ಬದಲಾವಣೆಗೆ ದೊಡ್ಡ ಕೊಡುಗೆ ನೀಡಿರುವರು. ಆಧುನಿಕ ಕನ್ನಡದ ಕವಿಗಳಾದ ಗೋವಿಂದ ಪೈ, ಬಿ.ಎಂ.ಶ್ರೀ, ತಿ.ನಂ.ಶ್ರೀ, ಕುವೆಂಪು, ಬೇಂದ್ರೆ, ಪಂಜೆ ಮಂಗೇಶರಾಯ, ದಿನಕರ, ಜಿ.ಎಸ್.ಶಿವರುದ್ರಪ್ಪ, ಶಿವರಾಮ ಕಾರಂತ, ಬಸವರಾಜ ಕಟ್ಟಿಮನಿ, ತ.ರಾ.ಸು, ಅ.ನ.ಕೃ, ತ್ರಿವೇಣಿ, ಪಿ.ಲಂಕೇಶ, ಡಿ.ವಿ.ಜಿ. ಕೆ.ಎಸ್.ನರಸಿಂಹಸ್ವಾಮಿ, ಆರ್.ಸಿ.ಹಿರೇಮಠ, ವಿ.ಕೃಗೋಕಾಕ್, ಆರ್.ನರಸಿಂಹಾಚಾರ್, ಭೈರಪ್ಪ, ಮಾಸ್ತಿ, ಚನ್ನವೀರ ಕಣವಿ, ಚಂದ್ರಶೇಖರ ಕಂಬಾರ, ಆನಂದಕಂದ, ಕಾರ್ನಾಡ, ಅನಂತಮೂರ್ತಿ ಮುಂತಾದವರು ಸಮಾಜ ಮುಖಿಯಾದ ಸಾಹಿತ್ಯ ರಚನೆಯೊಂದಿಗೆ ಸಾಹಿತ್ಯ ಕೃತಿ–ಕಾವ್ಯಗಳಿಂದ ಸಮಾಜ ಬದಲಾವಣೆ ನಡದೇ ಇದೆ. ಕವಿಶ್ರೇಷ್ಠರಾದ ಕುವೆಂಪುರವರು **ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು.** ಎನ್ನುತ್ತಾ **ಓ ನನ್ನ ಚೇತನ ಆಗು ನೀ ಅನಿಕೇತನ** ಎಂಬ ವಿಶ್ವಮಾನವ ತತ್ವ ಭೋದಿಸಿದ್ದಾರೆ. **ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ ! ಜಗ್ಗದೆಯೆ ಕುಗ್ಗದೆಯೇ ಹಿಗ್ಗಿ ನಡೆ ಮುಂದೆ !** ಎಂದು ಸಮಾಜ ಕಟ್ಟಲು ಜನರನ್ನು ಪ್ರೇರೇಪಿಸಿದರು. **ಬೇಂದ್ರೆಯವರು 'ಇನ್ನೂ ಯಾಕ ಬಂದಿಲ್ಲವ್ವಾ, ಹುಬ್ಬಳ್ಳಿಯಂವಾ, ವಾರದಾಗ ಮೂರ ಸರತಿ ಬಂದ ಹೋಗಾಂವಾ !** ಈ ಕವಿತೆಯ ಮೂಲಕ ಅನ್ಯ ಸಂಬಂಧ ನಡೆಯದಂತೆ ಸಮಾಜವನ್ನು ತಿದ್ದಲು ಹೊರಟಿದ್ದಾರೆ. ಸಮಾಜದಲ್ಲಿ ಹಣಕ್ಕಾಗಿ ಏನೆಲ್ಲ ನಡೆಯುತ್ತದೆ ಎನ್ನುವುದನ್ನು **'ಕುರುಡು ಕಾಂಚಾಣಾ ಕುಣಿಯುತಲಿತ್ತು । ಕಾಲಿಗೆ ಬಿದ್ದವರ ತುಳಿಯುತಲಿತ್ತೋ॥** ಬಾಣಂತಿ, ಮಕ್ಕಳು, ಬಡವರ, ಕೂಲಿ ನಾಲಿ ಮಾಡುವವರ ನೋವು ಹಣದಿಂದ ನಡೆಯುವ ಶೋಷಣೆ, ದಬ್ಬಾಳಿಕೆಗೆ ಬಲಿಯಾಗುವ ಸಾಮಾಜಿಕ ಪಿಡುಗನ್ನು ತಿಳಿಸಿದ್ದಾರೆ. ಹಣದ

ಮೋಹ, ಅನೈತಿಕತೆಯನ್ನು, ಮೌಢ್ಯತೆಯನ್ನು ಹೊಡೆದೋಡಿಸುವ ಸಾಮಾಜಿಕ ಕಳಕಳಿಯೊಂದಿಗೆ ತಮ್ಮ ಲೇಖನಿಯನ್ನು ಕಾವ್ಯಗಳಲ್ಲಿ ದುಡಿಸಿದ್ದಾರೆ. **ನನ್ನ ದೇಶ ನನ್ನ ಜನ/ನನ್ನ ಮಾನ ಪ್ರಾಣ ಘನ/ ತೀರಿಸುವೆನು ಅದರ ಋಣ ಈ ಒಂದೆ ಜನ್ಮದಿ**...ಎಂದು ಹಾಡಿದ್ದಾರೆ.

ಹೀಗೆ ಕನ್ನಡ ಕವಿಗಳು ತಮ್ಮ ಕಾವ್ಯಗಳ ಮೂಲವಸ್ತುನ್ನು ತಾವು ಬದುಕಿದ ಸಮಕಾಲೀನ ಸಾಮಾಜದಲ್ಲಿ ಇರುವ ಅಪಮೌಲ್ಯಗಳನ್ನು ಅಳಿಸಿ ಹಾಕಿ ಉತ್ತಮ ಮೌಲ್ಯಗಳನ್ನು ಸ್ಥಾಪಿಸಿರುವರು. ಸರ್ವಕಾಲಕ್ಕೂ ಒಪ್ಪಿತವಾಗುವ ಪ್ರೀತಿ-ಪ್ರೇಮ, ನೀತಿ-ತತ್ವ, ಧರ್ಮ-ಭಕ್ತಿ, ಜ್ಞಾನ, ಶ್ರದ್ಧೆ, ನಿಷ್ಠೆ, ಮತ್ತು ಸಂಸ್ಕಾರ, ಸಂಸ್ಕೃತಿಯಂಥ ಸತ್ಯಯುಕ್ತ ಮೌಲ್ಯಗಳನ್ನು ಸದಾ ಸಮಾಜದಲ್ಲಿ ಪ್ರತಿಧ್ವನಿಸುವಂತೆ ಕಾವ್ಯಗಳನ್ನು ರಚಿಸಿರುವರು. ಇದು ಕನ್ನಡ ಸಾಹಿತ್ಯದ ಶ್ರೇಷ್ಠ ಸಾಧನೆಯಾಗಿದೆ. ಕಾಲಾತೀತ ಸತ್ಯವೂ ಆಗಿದೆ. ಪ್ರಾರಂಭದಲ್ಲಿ ಅಧ್ಯಾತ್ಮದ ಮೂಲದಿಂದ ಪ್ರಾರಂಭವಾಗಿ ವೀರಯುಗದ ಮೌಲ್ಯ ನಂತರ ಭಕ್ತಿ ಯುಗದವರಗೂ ಕಾವ್ಯ ಕೃತಿ ಹುಟ್ಟಿಕೊಳ್ಳುತ್ತಾ ಅದೇ ದಾರಿಯಲ್ಲಿ ಸಮಾಜದಲ್ಲಿ ದಟ್ಟವಾಗಿದ್ದ ಭಕ್ತಿ ಕಡಿಮೆಯಾದಂತೆ ಅದರ ಬೋಧನೆ ಹೆಚ್ಚಾಯಿತು. ಅಂದರೆ ಯಾವ ಕಾಲದಲ್ಲಿ ಯಾವ ಮೌಲ್ಯ ಜನಸಾಮಾನ್ಯನ ಜೀವನದಿಂದ, ಸಮಾಜದಿಂದ ಬಿಟ್ಟು ಹೋಗುತಿತ್ತೋ ಆಗ ಅಂತಹ ಮೌಲ್ಯಗಳನ್ನು ಕವಿಗಳು ತಮ್ಮ ಕಾವ್ಯದ ಮೂಲಕ ಉಳಿಸಲು ಹೊರಟರು. ಸಾಮಾಜಿಕ ಕಳಕಳಿ ಪ್ರತಿ ಕವಿಯ ಕಾವ್ಯದಲ್ಲಿ ಆಯಾ ಕಾಲಘಟ್ಟಕ್ಕೆ ತಕ್ಕಂತೆ ಕಾಣಬಹುದು. **ಪಂಪ**-'ಮಾನವ ಜಾತಿ ತಾನೊಂದೆ ವಲಂ' ಎಂದು ಒಗ್ಗಟ್ಟಿನ ಏಕತೆಯ ಸಂದೇಶ ಹೇಳಿದರೆ-ವಚನಕಾರರಲ್ಲಿ 'ಜಾತಿ-ಲಿಂಗಭೇದ', 'ಕಾಯಕ', 'ಶರಣತ್ವ', ಸಾಮಾಜಿಕ ಅಸಮಾನತೆ', 'ನಡೆ-ನುಡಿ', 'ಆಚಾರ-ವಿಚಾರ' ಕುರಿತು ವಚನ ರಚನೆ ಮಾಡಿದರು. ಹರಿಹರ-'ಭಕ್ತಿ' ಪ್ರಧಾನಕಾವ್ಯ ರಚಿಸಿದ. ರಾಘವಾಂಕ-'ಸತ್ಯ' ಎಂಬ ಮೌಲ್ಯವನ್ನು ಸಮಾಜದಲ್ಲಿ ಸ್ಥಾಪಿಸಲು ಹರಿಶ್ಚಂದ್ರ ಕಾವ್ಯ ರಚಿಸಿದ. ಕೀರ್ತನಕಾರರಾದ ಕನಕದಾಸ, ಪುರಂದರದಾಸರು, ವಿಜಯದಾಸ, ಜಗನ್ನಾಥ ದಾಸರು ಭಕ್ತಿ, ಆರಾಧನೆ ಜೊತೆಗೆ ಜಾತಿ, ಲಿಂಗ ಬೇದ ಸಮಾನತೆಯೊಂದಿಗೆ ಸಾಮಾಜಿಕ ಬದಲಾವಣೆಗೆ ಮುಂದಾದರು. ಪಾತಿವ್ರತ್ಯದ ಕೊರತೆಯ ಸಂದರ್ಭದಲ್ಲಿ ಜಾಗ್ರತಿ ಮೂಡಿಸಲು ಸಂಚಿ ಹೊನ್ನಮ್ಮ ಹದಿಬದೆಯ ಧರ್ಮ ಬರೆದಳು. ಸಮಾನತೆ, ವೈರಾಗ್ಯ, ಕಾಯಕ, ಗುಶಿಷ್ಯರ ಸಂಬಂಧ ಅಧ್ಯಾತ್ಮ ಕುರಿತು ತತ್ವಪದಕಾರರಾದ ಶಿಶುನಾಳ ಶರೀಪಾದಿಗಳು ಶ್ರಮಿಸಿದರು. ಆಧುನಿಕ ಕನ್ನಡ ಕವಿಗಳಾದ ಕುವೆಂಪು-ಬೇಂದ್ರೆ-ಬಿ.ಎಂ.ಶ್ರೀಗಳಿಂದ ಇಂದಿನವರಗೂ ಕವಿತೆ ರಚಿಸುತ್ತಿರುವ ಕವಿಗಳು ನಾಡು, ನುಡಿ, ಜಾತಿ, ಸಮಾನತೆ, ಶೋಷಣೆ, ಸ್ತ್ರೀ ಸಬಲೀಕರಣ, ಕೌಟುಂಬಿಕ ಸ್ವಾಸ್ಥ್ಯ, ಆರ್ಥಿಕತೆ, ಭ್ರಷ್ಟಾಚಾರ ನಿರ್ಮೂಲನೆ, ಭಯೋತ್ಪಾದನೆ ತಡೆಗಟ್ಟುವಿಕೆ, ಒಳ್ಳೆಯ ಶಿಕ್ಷಣ, ನಿಜಜ್ಞಾನದ ಜಾಗ್ರತೆಯೊಂದಿಗೆ, ನಿಕೇತನರು ಅನಿಕೇತರಾಗುವ ಸಂದೇಶದೊಂದಿಗೆ ವಿಶ್ವಮಾನವ ತತ್ವವನ್ನು ಭೋದಿಸುತ್ತಿರುವರು. ಕನ್ನಡ ಕಾವ್ಯ ಸರ್ವರಿಗೂ ಬಳಸಿಕೊಳ್ಳಲಿರುವುದು. ಇದು ಓರ್ವರ ಕಾಲವಲ್ಲ ಸರ್ವರ ಕಾಲವೆಂದು ಸರ್ವ ಸಮಾನ ತತ್ವವನ್ನು ಎತ್ತಿಹಿಡಿಯುತ್ತಾ ಸಮಾಜಮುಖಿಗೊಳಿಸಿದರು. ಹೀಗೆ ಆಯಾ ಕಾಲದಲ್ಲಿ ಸಮಾಜ ದಾರಿ ತಪ್ಪಿದಾಗ ಅದನ್ನು ಸರಿಪಡಿಸಿಕೊಂಡು, ತಿದ್ದಿ-ತೀಡಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕವಿಗಳು ಕಾವ್ಯ ರಚಿಸಿದ್ದಾರೆ. ಹಾಗಾಗಿ ಕಾವ್ಯ ಕಾಲಾತೀತ ಧೋರಣೆ, ತತ್ವ-ಮೌಲ್ಯದೊಂದಿಗೆ ಸರ್ವ ಕಾಲದಲ್ಲಿ ಕಾವ್ಯಗಳು ನಮ್ಮೊಂದಿಗೆ ಮಾತಾಡುತ್ತಿವೆ. ಚರ್ಚೆಗೊಳಪಡಿಸಿ ನಮ್ಮನ್ನು, ಸಮಾಜವನ್ನು ಹೊಸ ರೀತಿಯಲ್ಲಿ ಕಟ್ಟಿಕೊಳ್ಳುವಲ್ಲಿ ಅಣಿಗೊಳಿಸುತ್ತಿವೆ. ಆದ್ದರಿಂದ ಕಾವ್ಯ ಸರ್ವರ ಸ್ವತ್ತು, ಕಾವ್ಯ ಸಮಾಜದ ಪ್ರತಿಬಿಂಬವೂ ಹೌದು, ಗತಿಬಿಂಬವು ಹೌದು. ಸದಾ ಸಮಾಜದ ಆತ್ಮವಾಗಿ ಜೀವಂತ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಂಜೀವಿನಿಯಾಗಿವೆ.

**ಪರಾಮರ್ಶನ ಗ್ರಂಥಗಳು :**


1) ಡಾ. ಎಲ್. ಬಸವರಾಜು – ಪಂಪನ ಸಮಸ್ತ ಭಾರತ ಕಥಾಮೃತ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2) ಪ್ರೊ. ಬಸವನಾಳ ಶಿವಲಿಂಗಪ್ಪನವರು – ಬಸವಣ್ಣನವರ ಷಟಸ್ಥಲದ ವಚನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
3) ಫ.ಗೂ.ಹಳಕಟ್ಟಿ ಸಮಗ್ರ ವಚನ ಸಾಹಿತ್ಯ,
4) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಸಂಪುಟಗಳು – ಸ್ವಪ್ನ ಬುಕ್ ಹೌಸ್, ಬೆಂಗಳೂರು-2020
5) ವಿ. ಸೀತಾರಾಮಯ್ಯ – ಕವಿರಾಜ ಮಾರ್ಗ ಕವಿ-ಕಾವ್ಯ ಪರಂಪರೆ.ಐ.ವಿ.ಹೆಚ್ ಪ್ರಕಾಶನ – ಬೆಂಗಳೂರು.
6) ಡಾ. ಕೆ. ಸಿ. ಶಿವಾರೆಡ್ಡಿ, ಸಂ- 1, ಕುವೆಂಪು ಸಮಗ್ರ ಕಾವ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
7) ಡಾ. ಸಿ. ಎನ್. ರಾಮಚಂದ್ರನ್ ಸಂ- ಕೆ. ಎಸ್. ನರಸಿಂಸ್ವಾಮಿ ಸಮಗ್ರ ವಜ್ಮಯ- ಕಾವ್ಯ-1-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
8) ಕಣವಿ ಕಾವ್ಯಭಂಡಾರ, ಸಂ-1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-2009
9) ವಾಮನ ಬೇಂದ್ರೆ, ಸಂ- ಅಂಬಿಕಾತನಯದತ್ತರ ಸಮಗ್ರ ಕಾವ್ಯ ದರ್ಶನ – ವರಕವಿ ಡ. ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ-2017
10) ರಾಘವೇಂದ್ರ ಪಾಟೀಲ, ಸುರೇಶ ಬೆಗೇರಿ ಸಂ- ಬೆಳುವಲದ ಸುಗ್ಗಿ, ಆನಂದಕಂದರ ಸಮಗ್ರ ಕಾವ್ಯ, ಡಾ.ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ. 2011
11) ಡಾ. ಬಸವರಾಜ ಸಬರದ, ಡಾ. ಸಿ. ನಾಗಭೂಷಣ, ಸಂ- ಆಯ್ದ ಕೀರ್ತನೆಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
12) ವಿನಾಯಕ – ಸಮುದ್ರ ಗೀತೆಗಳು – ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-2006